ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬಾಗೇಪಲ್ಲಿ

**ಸಿ.ಸಿ.ಸಂಖ್ಯೆ ಃ-59/2015**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಮಲ್ಲಪ್ಪ | |
| ತಂದೆಯ/ಗಂಡನ ಹೆಸರು | ಃ ಅಶ್ವಥಪ್ಪ | ಪ್ರಮಾಣೀಕರಿಸಲಾದ ದಿ :21-10-2015 |
| ವಯಸ್ಸು | ಃ 60 | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ಸಂಜೀವರಾಯನಪಲ್ಲಿ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ-**

ಚಾ ಸಾ 2 ನನ್ನ ತಮ್ಮನ ಮಗ. ಅವರು ಈಗ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗೆ ಮತ್ತು ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ಚಾ ಸಾ 3 ನಮ್ಮ ಪಕ್ಕದ ಊರಿನವರು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ.

ಒಂದೂವರೆ ವರ್ಷದ ಹಿಂದೆ ಚಾ ಸಾ 2 ರವರಿಗೆ ಅಪಘಾತವೂ ರಾತ್ರಿ 7.30 ಯಿಂದ 8 ಗಂಟೆ ಸಮಯದಲ್ಲಿ ಮರಗೋಡು ಹತ್ತಿರ ಆಗಿದ್ದು ಈ ವಿಚಾರವನ್ನು ಚಾ ಸಾ 3 ರವರು ನನಗೆ ರಾತ್ರಿ 7.45 ಗಂಟೆ ಸಮಯದಲ್ಲಿ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಸದರಿರವರು ನನ್ನ ತಮ್ಮನ ಮಗನಿಗೆ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ಕರೆ ಮಾಡಿದ ಸಂದರ್ಭದಲ್ಲಿ ಚಾ ಸಾ 3 ಬೆಂಗಳೂರು ಕಡೆಯಿಂದ ಬರುತ್ತಿರುವುದಾಗಿ ತಿಳಿಸಿರುತ್ತಾರೆ. ಚಾ ಸಾ 2 ರವರು ಬಾಗೇಪಲ್ಲಿಯಿಂದ ವರಲಕೊಂಡಗೆ ಹೀರೋ ಹೊಂಡ ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿರುವಾಗ ಒಂದು ಕಾರು ಪುಟ್ಟಪರ್ತಿ ಕಡೆಯಿಂದ ಬರುತ್ತಾ ಅಪಘಾತ ಮಾಡಿದೆ ಎಂದು ತಿಳಿಸಿರುತ್ತಾರೆ. ಕಾರಿನ ಚಾಲಕ ತನ್ನ ಕಾರನ್ನು ಯಾವ ರೀತಿ ಚಾಲನೆ ಮಾಡಿಕೊಂಡು ಬಂದ ಎಂದು ನನಗೆ ಹೇಳಿರುವುದಿಲ್ಲ. ಅಪಘಾತದಿಂದ ಚಾ ಸಾ 2 ರವರಿಗೆ ತಲೆಗೆ, ಬಲಬುಜಕ್ಕೆ, ಮುಖಕ್ಕೆ, ಗಾಯಗಳಾಗಿರುತ್ತದೆ. ನಂತರ ನಾನು ಚಾ ಸಾ 2 ರವರನ್ನು ಮೊದಲು ಬಂದು ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಬಂದು ನೋಡಿರುತ್ತೇನೆ. ಬಾಗೇಪಲ್ಲಿ ಆಸ್ಪತ್ರೆಗೆ ಚಾ ಸಾ 3 ರವರು ಚಾ ಸಾ 2 ರವರನ್ನು ಸೇರಿಸಿರುತ್ತಾರೆ. ಅಪಘಾತ ಪಡಿಸಿದ ಕಾರು ಸ್ಥಳದಲ್ಲಿ ಇರಲಿಲ್ಲ. ನಾನು ಆಸ್ಪತ್ರೆಗೆ ಬಂದು ನೋಡಿದಾಗ ಚಾ ಸಾ 2 ರವರಗೆ ಗಾಯವಾಗಿದ್ದು ನಿಜವಾಗಿತ್ತು.

ನಂತರ ಚಾ ಸಾ 2 ರವರನ್ನು ಬೆಂಗಳೂರಿನ ಎಂ ಎಸ್ ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

ಚಾ ಸಾ 2 ಚಾಲನೆ ಮಾಡುತ್ತಿದ್ದ ವಾಹನದ ಸಂಖ್ಯೆ ಗೊತ್ತಿಲ್ಲ. ಅಪಘಾತ ಪಡಿಸಿದ ಎಂದು ಹೇಳಲಾದ ಕಾರಿನ ಸಂಖ್ಯೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ಪೋಲಿಸರ ಮುಂದೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನಿ ಪಿ 1 ಎಂದು ಗುರ್ತಿಸಲಾಯಿತು. ಚಾ ಸಾ 2 ರವರ ಜೊತೆ ನಾನು ಆಸ್ಪತ್ರೆಯಲ್ಲಿದ್ದ ಕಾರಣ ನಾನು 2 ದಿನದ ನಂತರ ಬಂದು ದೂರು ಸಲ್ಲಿಸಿರುತ್ತೇನೆ. ಅಪಘಾತ ಪಡಿಸಿದ ಕಾರಿನ ಚಾಲಕನ ಹೆಸರು ಗೊತ್ತಿಲ್ಲ. ದೂರು ಕೊಡವ ಸಂದರ್ಭದಲ್ಲಿ ಯಾರೋ ಕಾರಿನ ಚಾಲಕನ ಹೆಸರನ್ನು ಸುರೇಶ್ ಎಂದು ಹೇಳಿರುತ್ತಾರೆ. ಆರೋಪಿಯ ಹೆಸರು ಮತ್ತು ವಿಳಾಸವನ್ನು ಪೋಲಿಸರ ಮುಂದೆ ಮರು ಹೇಳಿಕೆ ನೀಡುವಾಗ ಹೇಳಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ-**

ಅಪಘಾತವಾದ ವಿಚಾರವನ್ನು ಚಾ ಸಾ 3 ನನಗೆ ರಾತ್ರಿ 9 ಗಂಟೆಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿ. ಚಾ ಸಾ 3 ರವರು ಕಾರಿನಲ್ಲಿ ಸದರಿ ದಿನ ಚಿಕ್ಕಬಳ್ಳಾಪುರಕ್ಕೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಚಾ ಸಾ 3 ರವರ ಕಾರಿನ ಮುಂದೆ ಚಾ ಸಾ 2 ರವರ ಕೆ ಎ 35 ಇ 6924 ದ್ವಿ ಚಕ್ರ ವಾಹನ ಹೋಗುತ್ತಿತ್ತು ಎಂದರೆ ಸರಿಯಲ್ಲ.

ಚಾ ಸಾ 3 ರವರು ನನಗೆ ಕೆ ಎ 05 ಎಂ ಎನ್ 1950 ಕಾರು ಅತಿವೇಗ ಮತ್ತು ನಿರ್ಲಕ್ಷ್ಯತೆಯಿಂದ ಅದರ ಚಾಲಕ ಚಾಲನೆ ಮಾಡಿಕೊಂಡು ಬಂದು ಚಾ ಸಾ 2 ರವರು ಹೋಗುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ್ದೇ ಎಂದು ತಿಳಿಸಿದ ಎಂದರೆ ಸರಿಯಲ್ಲ.

ಚಾ ಸಾ 2 ರವರಿಗೆ ಎದೆ ಮತ್ತು ಮೊಣಕಾಲಿಗೆ ಗಾಯಗಳಾಗಿತ್ತು ಎಂದರೆ ಸರಿ. ಚಾ ಸಾ 2 ರವರನ್ನು ಚಾ ಸಾ 3 108 ಆಂಬಲನ್ಸ್‌ನಲ್ಲಿ ಬಾಗೇಪಲ್ಲಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದರೆ ಸರಿ.

ದಿಃ7.2.14 ರಂದು ಪೋಲಿಸರ ಮುಂದೆ ಅಪಘತ ಪಡಿಸಿದ ಕಾರಿನ ಚಾಲಕನ ಹೆಸರು ಸೂರ್ಯಪ್ರಕಾರಶ್ ಪುಲಿಪಾಕ ಬಿನ್ ಪುಲಿಪಾಕ ಬಾಬಜಿರಾವ್, 34 ವರ್ಷ, ಬ್ರಾಹ್ಮಣರು ಶಿಕ್ಷಕ ವೃತ್ತಿ, ವಾಸಃ ಗರುಡ ಎನ್ ಕ್ಲೇವ್, 1 ನೇ ಮಹಡಿ, ಸರಾಕ್ಕಿ, ಜೆ ಪಿ ನಗರ, 1 ನೇ ಪೇಸ್, 4 ನೇ ಮೈನ್, ಬೆಂಗಳೂರು-78 ಎಂದು ತಿಳಿಸಿದ್ದೇನೆ ಎಂದರೆ ಸರಿ.

ಚಾ ಸಾ 3 ಸದರಿ ದಿನ ಚಿಕ್ಕಬಳ್ಳಾಪುರಕ್ಕೆ ಎನ್ ಹೆಚ್ 7 ರಸ್ತೆಯಲ್ಲಿ ಹೋಗುತ್ತಿರುವಾಗ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ ಪಿ 2 ಎಂದು ಗುರ್ತಿಸಲಾಯಿತು. ನಿ ಪಿ 2 ರ ಪ್ರಕಾರ ನನಗೆ ತಿಳಿಸಿದ್ದರೂ ಸಹಾ ಬೆಂಗಳೂರು ಕಡೆಯಿಂದ ಬರುತ್ತಿದ್ದರು ಎಂದು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಮಾನ್ಯ ಶ್ರೀ. ಕೆ ಎಸ್ ಆರ್ ಆರೋಪಿಯ ಪರ ವಕೀಲರಿಂದ ಃ-**

ಅಪಘಾತವಾಗುವ ಕಾಲಕ್ಕೆ ನಾನು ಸಂಜುರಾಯನ ಹಳ್ಳಿಯಲ್ಲಿದ್ದೇ. ಸಂಜೀವರಾಯಪಲ್ಲಿಗೂ ಅಪಘಾತವಾದ ಸ್ಥಳಕ್ಕೆ 3 ಮೈ ಅಂತರ ಇದೆ. ವಿಚಾರ ತಿಳಿದ ನಂತರ ನಾನು ನನ್ನ ಮಗ ಅಶೋಕರವರ ವಾಹನದಲ್ಲಿ ಬಂದಿರುತ್ತೇನೆ. ನಾನು ನೇರವಾಗಿ ಬಾಗೇಪಲ್ಲಿ ಆಸ್ಪತ್ರೆಗೆ ಬಂದಿರುತ್ತೇನೆ. ಆಸ್ಪತ್ರೆಯಲ್ಲಿ ಅರ್ಧ ಗಂಟೆ ಇದ್ದೆ. ಆಗ ಚಾ ಸಾ 3 ಇದ್ದರು. ಸೀನಪ್ಪ, ಅಶ್ವಥಪ್ಪ, ಅಶೋಕ ಅದೇ ರೀತಿ ನಮ್ಮವರೆಲ್ಲ ಆ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿದ್ದರು. ಚಾ ಸಾ 2 ರವರನ್ನು 7.45 ರಿಂದ 8 ಗಂಟೆಗೆ ಆಸ್ಪತ್ರೆಗೆ ಸೇರಿಸಿದ್ದರು. ಚಾ ಸಾ 2 ರವರನ್ನು ಯಾರು ಪರಗೋಡಿನರವರು ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿರುತ್ತಾರೆ. ಚಾ ಸಾ 2 ರವರಿಗೆ ಮದುವೆಯಾಗಿ ಇಬ್ಬರು ಮಕ್ಕಳಿರುತ್ತಾರೆ. ಚಾ ಸಾ 2 ರವರ ಮಾವನ ಹೆಸರು ವೆಂಕಟನರಸಿಂಹಪ್ಪ, ಆಸ್ಪತ್ರೆಗೆ ಚಾ ಸಾ 2 ರವರ ಹೆಂಡ್ತಿ, ಮಾವ ಮತ್ತು ಮಕ್ಕಳು ಬಂದಿರಲಿಲ್ಲ. ನಾನು ದೂರ ಕೊಟ್ಟ ಒಂದು ತಿಂಗಳ ನಂತರ ಪೋಲಿಸರು ವಿಚಾರಣೆ ಮಾಡಿರುತ್ತಾರೆ.

ನನಗೆ ಅಪಘಾತ ಪಡಿಸಿದ ವ್ಯಕ್ತಿ ಹೆಸರು, ತಂದೆ ಹೆಸರು ಮತ್ತು ವಿಳಾಸ ಗೊತ್ತಿಲ್ಲ ಎಂದರೆ ಸರಿ. ಸದರಿ ದಿನ ಸೂರ್ಯಪ್ರಕಾಶ್ ಯಾವುದೇ ಅಪಘಾತ ಮಾಡಿಲ್ಲ ಚಾ ಸಾ 2 ರವರೇ ಸ್ವತಃ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸೂರ್ಯಪ್ರಕಾಶ್‌ರವರೇ ಮಾನವೀಯ ದೃಷ್ಟಿಯಿಂದ 108 ಆಂಬುಲೆನ್ಸ್‌ಗೆ ಫೋನ್ ಮಾಡಿ ಚಾ ಸಾ 2 ರವರನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ವಿಚಾರ ನನಗೆ ಗೊತ್ತಿಲ್ಲದಿದ್ದರೂ ಸಹಾ ನಾನು ಚಾ ಸಾ 3 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಅಪಘಾತವಾದ ದಿನ ಚಾ ಸಾ 2 ರವರಿಗೆ ತೀವ್ರ ಸ್ವರೂಪದ ಗಾಯ ಆಗಿದ್ದ ಕಾರಣ ದೂರು ನೀಡಿಲ್ಲ. ನಾನು ಚಾ ಸಾ 2 ರವರನ್ನು ಆಸ್ಪತ್ರೆಗೆ ದಾಖಲು ಮಾಡಿ ಆ ನಂತರ ಮರು ದಿನ ಬಂದಿರುತ್ತೇನೆ. ಮರು ದಿನ ಬಂದ ತಕ್ಷಣ ಸಂಜೆ ದೂರು ನೀಡಿರುತ್ತೇನೆ.

ಚಾ ಸಾ 2 ರವರ ಹೆಂಡ್ತಿ ಪರಿಹಾರಕ್ಕಾಗಿ ಬೆಂಗಳೂರಿನ ನ್ಯಾಯಾಲಯದಲ್ಲಿ ಎಂ ವಿ ಸಿ 3655/14 ರ ಪ್ರಕಾರ ಕೇಸು ಹಾಕಿರುವ ವಿಚಾರ ನನಗೆ ಗೊತ್ತಿದ್ದರು ಸಹಾ ಇಲ್ಲ ಎಂದು ಸುಳ್ಳು ಹೇಳುತ್ತಿದೆನೆಂದರೆ ಸರಿಯಲ್ಲ. ಪರಿಹಾರ ಸಿಗಲಿ ಎಂಬ ಕಾರಣದಿಂದ ಆರೋಪಿ ಅಪಘಾತ ಪಡಿಸದಿದ್ದರೂ ಸಹಾ ಪಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ.

**ಮರುವಿಚಾರಣೆ ಃ-** ಇಲ್ಲ

(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು)

**ಓ.ಹೇ.ಕೇ.ಸರಿ ಇದೆ**

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಬಾಗೇಪಲ್ಲಿ.**